ಇರುವುದರಿಂದ ಸದನ ಬಿಟ್ಟು ಹೋಗಲು ಸಾಧ್ಯವಾಗುವುದಿಲ್ಲ. ಸಾಧ್ಯವಾದರೆ ಆದಿತ್ಯವಾರ ನಾನೇ ಆ ಸ್ಥಳಕ್ಕೆ ಭೇಟಿ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ.—ನಿಮ್ಮ ಇಲಾಖೆ ತಪ್ಪಿನಿಂದ ನಿಮ್ಮ ಪ್ರಕಾರ ನಾಲ್ಕು ಜನ ಸತ್ತಿದ್ದಾರೆಂದು ಹೇಳಿದ್ದೀರಿ. ಈ ರೀತಿ ಸತ್ತವರ ಕುಟುಂಬದವರಿಗೆ ಸರ್ಕಾರದಿಂದ ಏನಾದರೂ ಪರಿಹಾರ ಕೊಡಿಸಲು ಭರವಸೆ ಕೊಡುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—ಸರಕಾರದಿಂದ ಪರಿಹಾರ ಕೊಡಲಿಕ್ಕಾಗುವುದಿಲ್ಲ, ಮಾನ್ಯ ಮುಖ್ಯಮಂತ್ರಿಗಳ ರಿಲೀಫ್ ಫಂಡಿನಿಂದ ಏನಾದರು ಕೊಡಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ.—ನನ್ನದು ಒಂದೇ ಒಂದು ಸಬ್‌ಮಿಷನ್ ಇದೆ ತಂಮಕೂರಿಂ ಜಿಲ್ಲೆಯಲ್ಲಿ ಕೂಡ ೬ ಜನ ಸತ್ತಿದ್ದಾರೆಂದು ಈಗ ತಾನೆ ವರ್ತಮಾನ ಬಂದಿದೆ. ಇದನ್ನು ಆರೋಗ್ಯ ಸಚಿವರ ಗಮನವನ್ನು ಸೆಳೆದಿದ್ದೇನೆ. ತಾವು ಈ ಬಗ್ಗೆ ವಿವರಗಳನ್ನು ತರಿಸಿ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ವಿಷಯವನ್ನು ತರಿಸಿಕೊಡುತ್ತೇನೆ.

ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ಮೀಸಲಾತಿ ನಿಯಮಗಳಿಗನುಸಾರವಾಗಿ ದಿನಗೂಲಿ ನೌಕರರನ್ನು ಖಾಯಂಗೊಳಿಸುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸುಪ್ರೀಂಕೋರ್ಟಿನ ಆದೇಶದ ಮೇರೆಗೆ ದಿನಗೂಲಿ ನೌಕರರನ್ನು ಖಾಯಂಗೊಳಿಸುವಾಗ ಮೀಸಲಾತಿ ನಿಯಮವ ಅನುಸರಿಸುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಇಲ್ಲಿ ಕೆಲವು ವಿಚಾರ ಗಳನ್ನು ಹೇಳಬೇಕೆಂದಿದ್ದೇನೆ, ಇದಕ್ಕೆ ಹೇಳಿಕೆ ಏಕೆ ಕೊಡಲಿಲ್ಲವೆಂದರೆ ಕಳೆದ ಬಾರಿ ಇದು ಗಮನ ಸೆಳೆಯುವ ಸೂಚನೆಯಾಗಿ ಈ ಸದನದಲ್ಲಿ ಬಂದಿತು. ಆಗ ಸನ್ಮಾನ್ಯ ಸದಸ್ಯರುಗಳು ಕೆಲವು ಮಾಹಿತಿಗಳನ್ನು ಕೇಳಿದ್ದಾರೆ ಆದರೆ ಆಯಾಯ ಸಂಬಂಧ ಪಟ್ಟ ಇಲಾಖೆಯ ಮುಖ್ಯಸ್ಥರ ಹತ್ತಿರ ಕೂಡ ಇಲ್ಲ ಆದನ್ನು ಕೆಳಗಿನ ಹಂತದಿಂದ ಮಾಹಿತಿ ಸಂಗ್ರಹ ಮಾಡುವುದಕ್ಕೆ ಸರಕಾರ ಈಗಾಗಲೇ ಆದೇಶ ಕೊಟ್ಟಿದೆ. ಬಹುಶ: ಇನ್ನು ೧೦–೨೦ ದಿವಸದಲ್ಲಿ ಈ ಮಾಹಿತಿ ಬರುತ್ತದೆ. ಇದನ್ನು ಸಂಗ್ರಹ ಮಾಡುವುದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ತಮ್ಮ ಹತ್ತಿರ ಕೂಡ ಇದರ ಬಗ್ಗೆ ವಿನಂತಿಮಾಡಿಕೊಂಡಿದ್ದೇನೆ, ಸ್ವಲ್ಪ ಇನ್‌ಫರ್ಮೇಷನ್ ಇದೆ. ಪೂರ್ತಿಯಾದಂತಹ ಮಾಹಿತಿ ಇಲ್ಲ ತಾವು ಸ್ವಲ್ಪ ಸಮಯಕೊಟ್ಟರೆ....

ಉಪಾಧ್ಯಕ್ಷರು.—ಸ್ವಲ್ಪ ಸಮಯ ಕೊಟ್ಟು ಪೂರ್ಣ ಉತ್ತರವನ್ನು ಸಂಬಂಧಪಟ್ಟವರಿಂದ ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಬಹಳ ಮಹತ್ವವಾದ ಪ್ರಶ್ನೆ ಇದರಲ್ಲಿ ರೋಸ್ಟರ್ ಸಿಸ್ಟಂ ಫಾಲೋ ಮಾಡಬೇಕೆನ್ನುವ ಅವಶ್ಯಕತೆ ಇದೆ. ೫೫ ಸಾವಿರ ಜನರನ್ನು ಸುವಾಮೋಟೋ ರೆಗ್ಯುಲರೈಸ್ ಮಾಡುತ್ತಿದ್ದೀರಿ ಇಷ್ಟು ಜನರನ್ನು ರೆಗುಲರೈಸ್ ಮಾಡಿದ ಮೇಲೆ...

ಶ್ರೀ ಎಂ ವೀರಪ್ಪ ಮೊಯಿಲಿ.—ನಾನು ಹೇಳಿಕೆಯನ್ನು ಕೊಟ್ಟಿಲ್ಲ. ಈ ಸೆಷನ್ ಒಳಗೆ ಅಂದರೆ ೧೫–೨೦ ದಿವಸದಲ್ಲಿ ಹೇಳಿಕೆ ಕೊಡುತ್ತೇನೆ.

ಉಪಾಧ್ಯಕ್ಷರು,—ಈ ಅಧಿವೇಶನದಲ್ಲಿಯೇ ಹೇಳಿಕೆ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನು ೪–೫ ದಿವಸಗಳಲ್ಲಿ ಯಾದರೂ ಹೇಳಿಕೊಟ್ಟರೆ ಪರವಾಗಿಲ್ಲ ಇಲ್ಲದಿದ್ದರೆ ನೀವು ಸರ್ಕಾರಿ ಆಜ್ಞೆ ಹೊರಡಿಸಿ ರೋಸ್ಟರ್ ಪ್ರಕಾರ ಫಿಲಪ್ ಮಾಡುವಾಗ ಬ್ಯಾಕ್‌ವರ್ಡ್‌ಗೆ ಕೊಡುತ್ತೇವೆ ಎಸ್‌ಟಿ ಎಸ್‌ಸಿಯವರಿಗೆ ಕೊಡುತ್ತೇವೆಂದು ಹೇಳಿ ಈಗಿರುವವರನ್ನೇ ರೆಗ್ಯುಲರೈಸ್ ಮಾಡಿದರೆ ತಪ್ಪಾಗುತ್ತದೆ.

SRI M. VEERAPPA MOILY.—I think I need not give a partial information. Better I give full information. ಈ ಅಧಿವೇಶನದ ಕೊನೆ ದಿವಸ ಇದನ್ನು ಹಾಕಿದರೆ ಅನುಕೂಲವಾಗುತ್ತದೆ ಆಗ ಪೂರ್ತಿ ಮಾಹಿತಿಯನ್ನು ಈ ಸದನಕ್ಕೆ ನೀಡಲು ಸಾಧ್ಯವಾಗುತ್ತದೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾಹಿತಿಯನ್ನು ತರಿಸುವುದಕ್ಕೆ ನಿಮ್ಮಲ್ಲಿ ಮಿಷಿನರೀಸ್ ಇಧುತ್ತವೆ. ಇವತ್ತು ನಾನು ಪ್ರಶ್ನೆ ಹಾಕಿದ್ದು ಅಲ್ಲ. ಒಂದು ತಿಂಗಳಾಯಿತು ಇಷ್ಟರಲ್ಲಿ ಉತ್ತರವನ್ನು ತಯಾರು ಮಾಡಿಕೊಳ್ಳಬೇಕಾಗಿತ್ತು. ಈಗ ಪ್ರತಿಯೊಂದು ಇಲಾಖೆಯಲ್ಲಿ ರಿಸರ್ವೇಷನ್ ಮೈನ್‌ಟೇನ್ ಮಾಡೇ ಮಾಡುತ್ತೀರಿ ಯಾರು ಯಾರು ಎಷ್ಟು ಎಷ್ಟು ಇದ್ದಾರೆ ಎಂಬ ಮಾಹಿತಿ ಗೊತ್ತಿರುತ್ತೆದೆ. ಚೆನ್ನಪ್ಪರೆಡ್ಡಿಯವರ ವರದಿಯನ್ನು ಈಗಾಗಲೇ ಪಬ್ಲಿಷ್ ಮಾಡಿದ್ದೀರಿ, ಅಂಕಿ ಸಂಖ್ಯೆ ಇಲ್ಲದೆ ಅದನ್ನು ಪಬ್ಲಿಷ್ ಮಾಡಿದ್ದೀರಾ ? ದಿನಗೂಲಿ ನೌಕರರಾಗಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ತರಿಸಿಕೊಟ್ಟರೆ ನಮಗೂ ಅನುಕೂಲವಾಗುತ್ತದೆ.

ಶ್ರೀ ಎಂ, ವೀರಪ್ಪ ಮೊಯಿಲಿ.—ದಿನಗೂಲಿಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ಇದೆ. ಆದರೆ ಈ ನೌಕರರು ಯಾರಿದ್ದಾರೆ ಇವರು ಎ ಬಿ ಸಿ ಕೇಟಗಿರಿಯ ಪೈಕಿ ಯಾವುದಕ್ಕೆ ಸೇರಿದವರು ಇವರಲ್ಲಿ ಹಿಂದುಳಿದ ವರ್ಗದವರಿಗೆ ಎಸ್. ಸಿ. ಮತ್ತು ಎಸ್. ಟಿ ಯವರಿಗೆ ಎಷ್ಟು ಮೀಸಲಾತಿ ಇದೆ ಯಾವ್ಯಾವ ಇಲಾಖೆಯಲ್ಲಿ ಎಷ್ಟು ಜನ ಇದ್ದಾರೆ ಎಂಬ ಬಗ್ಗೆ ವಿವರವಾದ ಮಾಹಿತಿ ತರಿಸಬೇಕಾಗುತ್ತಾದೆ. ಸರಿಯಾದಂತಹ ಮಾಹಿತಿ ಒದಗಿಸುವುದು ನಮ್ಮ ಕರ್ತವ್ಯ ಆದರಲ್ಲಿ ಕೆಲವು ಬಂದಿದೆ ಇನ್ನು ಕೆಲವು ಬರಬೇಕಾಗಿದೆ. ಪೂರ್ತಿಯಾದಂತಹ ಮಾಹಿತಿಯನ್ನು ಒದಗಿಸುವುದಕ್ಕೋಸ್ಕರ ವಾಗಿ ಸಮಯವನ್ನು ಕೇಳುತ್ತಿದ್ದೇವೆ. ಎಷ್ಟು ಜನರನ್ನು ಖಾಯಂ ಮಾಡಬೇಕು ಎಷ್ಟು ಜನರಿಗೆ ಸುಪ್ರೀಂ ಕೋರ್ಟಿನ ಆದೇಶ ಅನ್ವಯವಾಗುತ್ತೆದೆ ಎಂಬ ಮಾಹಿತಿ ಬಗ್ಗೆ ಬ್ರೇಕ್ ಆಪ್ ಇಲ್ಲದ ಕಾರಣ ದಿಂದ ಸಮಯವನ್ನು ಕೇಳುತ್ತಿದ್ದೇವೆಯೇ ಅನ್ಯತಾ ಅಲ್ಲ.

೧೨–೩೮ ಪಿ.ಎಂ.

ನಿಯಮ ೩೩೪ರ ಮೇರೆಗೆ

ಶ್ರೀ ಜಿ. ರಾಜಗೌಡ (ಹಾನಗಲ್ಲು).—ಸನ್ಮಾನ್ಯ ಉಪಾಧ್ಯಕ್ಷೆಯವರೆ, ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಂಡುವಾಡು ಗ್ರಾಮದಲ್ಲಿ ವಿದ್ಯುತ್ ಬೀದಿ ದೀಪದ ವ್ಯವಸ್ಥೆ ಇದ್ದರೂ ಸಾಕಷ್ಟು ವೋಲ್ಟೇಜ್ ಇಲ್ಲದೆ ಕಳೆದ ೧ ವರ್ಷದಿಂದಲೂ ಆ ಗ್ರಾಮದ ಜನರ ಮನಸ್ಸಿನಲ್ಲೂ, ಬೀದಿಯಲ್ಲೂ ದೀಪದ ಬೆಳಕು ಚೆಲ್ಲುತ್ತಿಲ್ಲ. ಆದುದರಿಂದ ಟ್ರಾನ್ಸ್‌ಫಾರ್ಮರ್‌ನ್ನು ಬದಲಾಯಿಸಲು ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳನ್ನು ಕೋರಿದ್ದರೂ ಅವರು ಆ ಕೆಲಸ ಮಾಡಲು ವಿಫಲವಾಗಿದ್ದಾರೆ. ಆದುದರಿಂದ ತಾವು ಈ ನ್ಯೂನತೆಯನ್ನು ಸರಿಪಡಿಸಲು ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಖಾತೆಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಉಪಾಧ್ಯಕ್ಷೆಯವರೆ. ಮಾನ್ಯ ಸದಸ್ಯರು ಎತ್ತಿರತಕ್ಕಂಥ ಈ ವಿಚಾರವನ್ನು ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳ ಗಮನಕ್ಕೆ ತಂದು ಮುಂದಿನ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಉಪಾಧ್ಯಕ್ಷರೇ, ಬೆಳಿಗ್ಗೆ ೭–೦೦ ಗಂಟೆಯಿಂದ ಸಂಜೆ ೭–೦೦ ಗಂಟೆಯವರೆಗೆ ಪೆಟ್ರೋಲ್ ಮಾರಾಟ ಮಾಡುವುದು ಸರ್ಕಾರದ ನೀತಿ ಆಗಿದ್ದು...

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷೆಯವರೆ, ಪೆಟ್ರೋಲ್ ಮಾರಾಟದ ಮೇಲೆ ನಿರ್ಬಂಧವನ್ನು ಹಾಕಿರುವುದರಿಂದ ಕಳ್ಳಸಾಗಾಣಿಕೆಗೆ ಅವಕಾಶವಾಗಿದೆ.....

(ಗೊಂದಲ)

ಉಪಾಧ್ಯಕ್ಷೆಯವರು.—ಮೊದಲು ಅವರದ್ದು ಮುಗಿಯಲಿ, ಅವರು ಏನು ಹೇಳುತ್ತಾರೋ ಕೇಳೋಣ.

(ಗೊಂದಲ)

ಉಪಾಧ್ಯಕ್ಷೆಯವರು.—ಮೊದಲು ಅವರು ಏನು ಹೇಳುತ್ತಾರೋ ನೋಡೋಣ.

SRI AZEEZ SAIT.—This was referred to the Hon'ble Chief Minister Now it is has been transforred to me ie. to-day only. Therefore, I want two days time to come before the House with a reply.

(ಗೊಂದಲ)